ಶ್ರೀ ಡಿ.ಆರ್.ಪಾಟೀಲ್: ಕೆಪಿಸಿಯಲ್ಲಿ ಎಸ್ಕಲೇಶನ್ ಕ್ಲಾಸ್ ಅನ್ನು ಹೇಗೆ ತೆಗೆದುಹಾಕಿದ್ದಾರೊ, ಹಾಗೆ ಪಿಡಬ್ಲ್ಯೂಡಿಯಲ್ಲೂ ಕಂಟ್ರಾಕ್ಟ್‌ಗೆ ಸಂಬಂಧಿಸಿದಂತೆ ಎಸ್ಕಲೇಶನ್ ಕ್ಲಾಸ್ ತೆಗೆದುಹಾಕಲು ನಿಮಗೇನು ತೊಂದರೆ?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅದನ್ನು ಪರಿಶೀಲನೆ ಮಾಡಿ ಹೇಳುತ್ತೇನೆ.

ಕಿತ್ತೂರು ಮತಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿಗೆ ಹಣ ಮಂಜೂರಾತಿ

148 (558) ಶ್ರೀ ಸುರೇಶ್. ಎಸ್.ಮಾರಿಹಾಳ್ : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಿತ್ತೂರು ಮತ ಕ್ಷೇತ್ರದಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ ಅವುಗಳ ಸುಧಾರಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ: (ಲೋಕೋಪಯೋಗಿ ಇಲಾಖೆ ಸಚಿವರು)

ಅ) ಕಿತ್ತೂರು ಮತಕ್ಷೇತ್ರದಲ್ಲಿ ತುಂಬಾ ಹದಗೆಟ್ಟಿರುವ ಯಾವುದೇ ಲೋಕೋಪಯೋಗಿ ಇಲಾಖೆ ರಸ್ತೆಗಳು ಇರುವುದಿಲ್ಲ.

ಆ) ರಾಜ್ಯ ಹೆದ್ದಾರಿಗಳನ್ನು 2005–08ನೇ ಸಾಲಿಗೆ 3 ವಾರ್ಷಿಕ ನಿರ್ವಹಣೆ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿದೆ. ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಇಲಾಖಾ ವತಿಯಿಂದ ತಗ್ಗುಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಸುರೇಶ್ ಎಸ್.ಮಾರಿಹಾಳ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಆದರೆ, 5054 ಮತ್ತು 3054 ಇದು ಸ್ಯಾಂಕ್ಷನ್ ಆಗಿದ್ದರೂ ಕಂಟ್ರಾಕ್ಟರ್ ಇಲ್ಲವೆಂದು ಈ ಕೆಲಸ ಮಾಡುವುದನ್ನು ಬಿಟ್ಟಿದ್ದಾರೆ. ಇದರ ಸಲುವಾಗಿ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಅವರು ಕರೆಕ್ಟಾಗಿ ಕೇಳಲಿಲ್ಲ. ದಯಮಾಡಿ ಮತ್ತೊಮ್ಮೆ ಹೇಳಬೇಕು.

ಶ್ರೀ ಸುರೇಶ್ ಎಸ್.ಮಾರಿಹಾಳ್: ಮಾನ್ಯ ಅಧ್ಯಕ್ಷರೆ, ನಮ್ಮ ಮತಕ್ಷೇತ್ರದಲ್ಲಿ ಬರತಕ್ಕಂಥ ಪಿಡಬ್ಲ್ಯೂಡಿ ರಸ್ತೆಗಳಿಗೆ ಸಂಬಂಧಿಸಿದಂತೆ 5054 ಮತ್ತು 3054 ಈ ಕಾಮಗಾರಿಗಳು ಆಗಿಲ್ಲ. ಇದರ ಸಲುವಾಗಿ ಉತ್ತರ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, 12ನೇ ಹಣಕಾಸು ಆಯೋಗದಲ್ಲಿ 5054ನಲ್ಲಿ ಯಾವುದಾದರೂ ಹಣಕಾಸು ನೆರವು ಕೊಟ್ಟರೆ, ಹಣಕಾಸು ಲಭ್ಯತೆ ಆಧಾರದ ಮೇಲೆ ಆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಗದಗಜಿಲ್ಲೆ ಕಪ್ಪತ್ ಗುಡ್ಡದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿರುವುದು

138 (561) ಶ್ರೀ ಪಾಟೀಲ್ ಎಸ್.ಎಸ್. ಮುಂಡರಗಿ: ಮಾನ್ಯ ಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ್ ಜಿಲ್ಲೆ ಕಪ್ಪತ್ ಗುಡ್ಡದಲ್ಲಿ ಗಣಿಗಾರಿಕೆಗಾಗಿ ಬಂದ ಅರ್ಜಿಗಳೆಷ್ಟು (ವಿವರ ನೀಡುವುದು)

ಆ) ಯಾವ ಯಾವ ಕಂಪನಿಗಳಿಗೆ ಗಣಿಗಾರಿಕೆಗಾಗಿ ಲೈಸೆನ್ಸ್ ನೀಡಲಾಗಿದೆ (ವಿವರ ನೀಡುವುದು):

ಇ) ಇದರಿಂದ ಅರಣ್ಯ ನಾಶವಾಗುತ್ತಿದ್ದು, ಗಣಿಗಾರಿಕೆಗೆ ಅನುಮತಿ ಕೊಡದಿರಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಗದಗ ಜಿಲ್ಲೆ, ದೋಣಿ ಗ್ರಾಮಗಳಿಗೆ (ಕಪ್ಪದಗುಡ್ಡ) ಬಂದಿರುವ ಪೂರ್ವಾನ್ವೇಷಣೆ, ಅನ್ವೇಷಣೆ ಮತ್ತು ಗಣಿ ಗುತ್ತಿಗೆ ಅರ್ಜಿಗಳ ವಿವರವನ್ನು ಅನುಬಂಧ–1 ರಲ್ಲಿ ನೀಡಿದೆ.

ಆ) ಗದಗ ಜಿಲ್ಲೆಯ ದೋಣಿ ಗ್ರಾಮದಲ್ಲಿ ಗಣಿಗಾರಿಕೆಗಾಗಿ 4 ಗಣಿಗುತ್ತಿಗೆಗಳನ್ನು ನೀಡಲಾಗಿದೆ. ವಿವರಗಳನ್ನು ಅನುಬಂಧ –2 ರಲ್ಲಿ ಲಗತ್ತಿಸಲಾಗಿದೆ.

ಇ) ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ಎಂ.ಎಂ. (ಡಿ ಅಂಡ್ ಆರ್) (ಗಣಿಗಳು ಮತ್ತು ಖನಿಜಗಳು ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅರಣ್ಯ ಪ್ರದೇಶದಲ್ಲಿ ಗಣಿಗುತ್ತಿಗೆ ಮತ್ತು ಅನ್ವೇಷಣೆಗಾಗಿ ಮಂಜೂರಾತಿ ಮಾಡಲು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣೆ ಪತ್ರ ಪಡೆಯಲಾಗುವುದು ಹಾಗೂ ಗಣಿಗಾರಿಕೆ ನೀಡುವುದರಿಂದ ಉಂಟಾಗುವ ಅರಣ್ಯ ನಾಶವನ್ನು ತಡೆಗಟ್ಟುವ ಸಲುವಾಗಿ ಅರಣ್ಯೇತರ ಪ್ರದೇಶದಲ್ಲಿ ಅರಣ್ಯೀಕರಣ ಕಾರ್ಯಕ್ರಮವನ್ನು ಕಡ್ಡಾಯಗೊಳಿಸಲಾಗಿದೆ. ಅರಣ್ಯ ಪ್ರದೇಶಕ್ಕೆ ಕೇಂದ್ರ ಸರ್ಕಾರವು ಅನುಮತಿ ನೀಡಿರುವುದರಿಂದ ಈ ಪ್ರದೇಶದ ಗಣಿಗಾರಿಕೆಗೆ ಅನುಮತಿ ನೀಡುವುದು ಅಥವಾ ನೀಡದಿರುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿಕೊಟ್ಟಿದ್ದಾರೆ. ನಿನ್ನೆ ಒಂದು ಚರ್ಚೆಯಾಯಿತು. ನಮ್ಮ ಅರಣ್ಯ ಸಚಿವರು ಅರಣ್ಯ ನಾಶವಾಗುವುದಿಲ್ಲವೆಂದು ಒಂದೇ ಮಾತಿನಲ್ಲಿ ಹೇಳಿ ಮುಗಿಸಿಬಿಟ್ಟರು. ಅರಣ್ಯ ನಾಶವಾಗುವುದಿಲ್ಲವೆಂದು ಅರಣ್ಯ ಮಂತ್ರಿಗಳೇ ಹೇಳಿದರೆ, ಅದು ದುರ್ದೈವದ ಸಂಗತಿ. ಆದರೆ, ಗಣಿಗಾರಿಕೆಯಿಂದ ಇವೊತ್ತು ಅರಣ್ಯ ನಾಶವಾಗುತ್ತಿರುವುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಅಧ್ಯಕ್ಷರೆ, ನಮ್ಮ ಕಪ್ಪತ್ತಗುಡ್ಡದಲ್ಲಿ ಪೂರ್ವಾನ್ವೇಷಣೆ ಮತ್ತು ಅನ್ವೇಷಣೆಗೆಂದು ಮೂರು ತರಹದ ಅರ್ಜಿಗಳು ಬಂದಿವೆ. ಅದರಲ್ಲಿ ಇನ್ನೊಂದು ಹೇಳಿದ್ದೀರಿ. ಆರ್‌ಪಿ ಅರ್ಜಿಗಳೆಂದರೆ ಏನು? ಅನ್ವೇಷಣಾ ಅರ್ಜಿಗಳೆಂದರೆ ಏನು? ಮತ್ತು ಎಂಎಲ್ ಅರ್ಜಿಗಳೆಂದರೆ ಏನು? ಈ ಮೂರು ತರಹದ ಅರ್ಜಿಗಳ ಬಗ್ಗೆ ಹೇಳಿದ್ದಾರೆ. ಅವು ಬೇರೆ ಬೇರೆ ಹಂತಗಳಲ್ಲಿವೆ. ಅವೆಲ್ಲಾ ಕೊನೆಗೆ ಏನು ಹೇಳುತ್ತಾರೆಂದರೆ, "ಈ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ನೀಡದೇ ಇರುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ" ಎಂದು.

ಹಾಗಾದರೆ, ನಮ್ಮದೇನೂ ಜವಾಬ್ದಾರಿ ಇಲ್ಲವೇ? ನಮ್ಮನ್ನು ಕೇಳದೇ ಅವರು ಕೊಡುತ್ತಾರೆಯೇ? ಇದು ನನ್ನ ಪ್ರಶ್ನೆ. ಅರಣ್ಯ ಪ್ರದೇಶ ಹಾಳಾಗುತ್ತದೆಯೆಂದು ಇಲ್ಲಿ ಒಪ್ಪಿಕೊಂಡಿದ್ದೀರಿ. ಆದರೆ, ಅಲ್ಲಿ ಏನು ಹೇಳುತ್ತಿದ್ದೀರೆಂದರೆ, 'ಅರಣ್ಯ ಪ್ರದೇಶದಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಲು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಲಾಗುವುದು ಹಾಗೂ ಗಣಿಗಾರಿಕೆಯಿಂದ ಉಂಟಾಗುವ ಅರಣ್ಯ ನಾಶ ತಡೆಗಟ್ಟುವ ಸಲುವಾಗಿ ಇರುವ ಅರಣ್ಯೇತರ ಪ್ರದೇಶದಲ್ಲಿ ಅರಣ್ಯೀಕರಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು'. ಅರಣ್ಯ ಹಾಳಾದ ನಂತರ ಅರಣ್ಯೇತರ ಪ್ರದೇಶ ಈ ರಾಜ್ಯದಲ್ಲಿ ಎಲ್ಲಿರುತ್ತದೆ? ಅದರಲ್ಲೂ ಮುಂಡರಗಿ ಮತಕ್ಷೇತ್ರದಲ್ಲಿ ಗದಗ-ಮುಂಡರಗಿಯಲ್ಲಿ ಏನಿದೆ. ಅಲ್ಲಿ ಹುಡುಕಿದರೂ ಅರಣ್ಯ ಸಿಗುವುದಿಲ್ಲ. ಗಣಿಗಾರಿಕೆಗೆ ಕೊಡುವುದರಿಂದ ಇರುವ ಅರಣ್ಯವೆಲ್ಲವನ್ನೂ ನಾಶ ಮಾಡುತ್ತಿದ್ದಾರೆ. ಅನಂತರ, ಗಾಳಿ ವಿದ್ಯುತ್ ಕೊಟ್ಟರೆ, ಸ್ವಲ್ಪ ಹೋಗುತ್ತದೆಂದು ಹೇಳಿದಿರಿ, ಸುಮ್ಮನಾದೆವು. ಗಣಿಗಾರಿಕೆಗೆ ಕೊಡುವುದರಿಂದ ಹಿಂದೊಮ್ಮೆ ದೊಡ್ಡಣ್ಣನವರು ಏನು ಅರಣ್ಯ ನಾಶ ಮಾಡಿ ಹೋಗಿದ್ದಾರೆ. ಪುನಃ ಈಗ ಅಲ್ಲಿ ಮೊದಲೇ ನಾವು ಬರಗಾಲದ ಪರಿಸ್ಥಿತಿಯಲ್ಲಿರುವ ಜನರು. ಅರಣ್ಯ ನಾಶವಾದರೆ, ಇವರ ಪರಿಸ್ಥಿತಿ ಏನು? ಆ ಕಾರಣ ನೀವು ಇದನ್ನು ಗಣಿ ಗುತ್ತಿಗೆದಾರರಿಗೆ ಕೊಡುವ ನಮ್ಮ ಮುಂಡರಗಿ ಮತ್ತು ಗದಗ ಪ್ರದೇಶದಲ್ಲಿ, ಕಪ್ಪತ್ತಗುಡ್ಡದಲ್ಲಿ ನಿಲ್ಲಿಸುತ್ತೀರಾ? ಹೇಗೆ? ನಿಮ್ಮನ್ನು ಕೇಳದೆ ಕೇಂದ್ರ ಸರ್ಕಾರ ಕೊಡುತ್ತಿದೆಯೇ? ಹೇಗೆ? ನನಗೆ ಉತ್ತರದಲ್ಲಿ ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಮುಖ್ಯ ಮಂತ್ರಿಗಳ ಪರವಾಗಿ): (ಗೃಹ, ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಕಳಕಳಿಯನ್ನು ನಾನು ಮೆಚ್ಚುತ್ತಿದ್ದೇನೆ. ಆದರೆ ಅಭಿವೃದ್ಧಿಗೆ ನಾವು ಕೊಡಬೇಕಾಗಿರತಕ್ಕ ಬೆಲೆ ಇದು. ನಾವು ಒಂದು ಕಡೆಗೆ ಅಭಿವೃದ್ಧಿಯಾಗಬೇಕೆಂದು ಬಿಯಸಿದಾಗ ಮತ್ತೊಂದು ಕಡೆಗೆ ಪರಿಸರದ ನಾಶವಾಗುತ್ತದೆ ಎಂಬುದು ತಮಗೆ ಗೊತ್ತಿದೆ. ಚಿನ್ನದ ನಿಕ್ಷೇಪವನ್ನು ತೆಗೆಯಬೇಕಾದ್ದು ಇದೆ. ಕಪ್ಪತ್ತ ಗುಡ್ಡ, ಕೆ.ಜಿ.ಎಫ್. ಮತ್ತು ಹಟ್ಟಿಯನ್ನು ಬಿಟ್ಟರೆ ಬೇರೆ ಕಡೆಯಲ್ಲಿ ಅದು ಸಿಗುವುದಿಲ್ಲ. ಆ ಕಾರಣಕ್ಕಾಗಿ ಕೆಲವು ಮಟ್ಟಿಗೆ ಇಂಥದ್ದೆಲ್ಲ ಆಗುತ್ತದೆ. ಅದಕ್ಕಾಗಿಯೇ ಒಂದು ಕಡೆಗೆ ಎಲ್ಲಾದರೂ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಅಭಿವೃದ್ಧಿ ಮತ್ತು ಪರಿಸರ ನಾಶದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಅರಣ್ಯ ಎಷ್ಟು ಪ್ರಮಾಣದಲ್ಲಿ ಹಾಳಾಗುತ್ತದೆ ಅಷ್ಟೇ ಪ್ರಮಾಣದಲ್ಲಿ 'ಸಿ' ಮತ್ತು 'ಡಿ' ವರ್ಗೀಕರಣಕ್ಕೆ ಒಳಗಾಗಿರುವ ಭೂಮಿಯಲ್ಲಿ ಅದಕ್ಕೆ ಲ್ಯಾಂಡ್ ಬ್ಯಾಂಕ್ ಎಂದು ಸಹ ನಾವು ಮಾಡಿದ್ದೇವೆ. ಲ್ಯಾಂಡ್ ಬ್ಯಾಂಕ್‌ನ್ನು ಮಾಡಿರುವ ಕಡೆಗಳಲ್ಲಿ ಅರಣ್ಯವನ್ನು ಬೆಳೆಸಬೇಕು ಎಂದು ಹೇಳಿ afforestation programme ಎಂದು ಏನು ಅರಣ್ಯವನ್ನು ಪುನರುಜ್ಜೀವನ ಗೊಳಿಸುವಂಥದ್ದು, ಬೆಳೆಸುವಂಥದ್ದು ಇದಕ್ಕೆ ಇಂತಿಷ್ಟು ದುಡ್ಡು ಎಂದು ಅವರ ಕಡೆಯಿಂದ ಸಂಗ್ರಹ ಮಾಡಿಕೊಂಡಿರುತ್ತೇವೆ. ಅವರು ಅದನ್ನು

ಪಾವತಿಸಬೇಕಾಗುತ್ತದೆ. ಆ ಕಾರಣಕ್ಕಾಗಿ ಮತ್ತೊಂದು ಕಡೆಗೆ ಮಾಡಿಸಿದ್ದೇವೆ. ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ನೀವು ಹೇಳಿದಂತೆ.. ಅದು ಒಂದು ವೇಳೆ ಕಪ್ಪತ್ತಗುಡ್ಡದಲ್ಲಿ ಆಗದೇ ಇರಬಹುದು, ಅದು ಮಲೆನಾಡಿನ ಪ್ರದೇಶದಲ್ಲಿ ಆಗಬಹುದು, ನಮ್ಮ ಹಡಗಲಿಯಲ್ಲಿ ಆಗದೆ ಬೇರೆ ಕಡೆಗಳಲ್ಲಿ ಆಗಿರುವ ಉದಾಹರಣೆಗಳೂ ಸಹ ಇದೆ. ಆದರೂ ಕೂಡ ಇದು ಅನಿವಾರ್ಯವಾಗಿ ಆಗಿರತಕ್ಕದ್ದು, ಇಲ್ಲಿಯವರೆಗೆ ನಿರಪೇಕ್ಷಣಾ ಪತ್ರವನ್ನು ಕೊಡತಕ್ಕ ಅಧಿಕಾರ ಮಾತ್ರ ಆ ಕಾಯ್ದೆಯ ಕೆಳಗೆ ನಮಗಿದೆ. ಏನಿದ್ದರೂ ಕೇಂದ್ರ ಸರ್ಕಾರ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ನಾವು ನಿರಪೇಕ್ಷಣಾ ಪತ್ರವನ್ನು ಮಾತ್ರ ಕೊಡಬೇಕಾಗುತ್ತದೆ. ಇಷ್ಟಕ್ಕೆ ಮಾತ್ರ ನಮ್ಮ ಅಧಿಕಾರ ಸೀಮಿತವಾಗಿದೆ. ಹಿಂದೆ ನೀವು ಯಾರ್ಯಾರ ಬಗ್ಗೆ ಹೇಳಿದ್ದೀರಿ ಅವರು ಇನ್ನೂ ಕಾಗದಪತ್ರಗಳನ್ನು ಕೊಟ್ಟಿಲ್ಲ. ಆ ಕಾಗದ ಪತ್ರಗಳನ್ನು ಕೊಟ್ಟಿಲ್ಲದಿರುವುದರಿಂದ ಆ ಅರ್ಜಿಗಳು ವಿಲೇವಾರಿಯಾಗಿಲ್ಲ. ಅದನ್ನು ಹಾಗೆಯೇ ನಿಲ್ಲಿಸಿದ್ದಾರೆ. ತಾವು ಮೂರು ವರ್ಗೀಕರಣದ ವಿಷಯವನ್ನು ಹೇಳಿದಿರಿ. P.L. ಅಂದರೆ prospective licensing, M.L ಅಂದರೆ Mining licensing, R.P.L ಅಂದರೆ Reconnaissance ಅಂದರೆ ನಾವು ಬೇಹುಗಾರಿಕೆ ಎಂದು ಏನು ಕರೆಯುತ್ತೇವೆ, ಯುದ್ದದಲ್ಲಿ Reconnaissance ವಿಮಾನಗಳು ಎಂದು ಕರೆಯುತ್ತೇವೆ. ಆ ರೀತಿಯಲ್ಲಿ ನೋಡಿಕೊಳ್ಳತಕ್ಕದ್ದು ಮೂರು ವರ್ಗೀಕರಣ ಇದೆ. ಅದಕ್ಕೆ ಸಂಬಂಧಪಟ್ಟಿರುವುದರ ಕೆಳಗೆ ಕ್ರಮ ಕೈಗೊಳ್ಳುತ್ತೇವೆ ಎಂಬ ಮಾತನ್ನು ಕೂಡ ಹೇಳಿದ್ದಾರೆ. ನಮ್ಮ ರಾಜ್ಯ ಸರ್ಕಾರದ ಪಾತ್ರ ಇದರಲ್ಲಿ ಸ್ವಲ್ಪ ಮಟ್ಟಿಗೆ ಗೌಣ.

ಅಧ್ಯಕ್ಷರು: ಮಾನ್ಯ ಎಸ್.ಎಸ್.ಪಾಟೀಲರು ಕೇಳುತ್ತಿದ್ದಾರೆ. ಮಾನ್ಯ ವೈಜನಾಥ್ ಪಾಟೀಲರೇ ಕೇಳಲಿ ಬಿಡಿ.

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಗಣಿಗಾರಿಕೆಗೆ ಬೇಗ ಲೈಸೆನ್ಸ್ ಸಿಗುತ್ತದೆ. Development ಯಾವುದಾದರೂ ಊರಿಗೆ ಗ್ರಾಮಕ್ಕೆ electric pools ಹಾಕುವುದಿರಬಹುದು ಅಥವಾ road ಮಾಡುವುದು ಇರಬಹುದು ಅದಕ್ಕೆ ನಿರ್ಬಂಧವನ್ನು ಹಾಕುತ್ತಾರೆ. ಗಣಿಗಾರಿಕೆಯವರೇ ಈ ದೇಶದಲ್ಲಿ ಬಹಳ ನಾಶ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕೂಡ ಅರಣ್ಯ ಪ್ರದೇಶವನ್ನು ನಾಶ ಮಾಡುವವರು ಗಣಿಗಾರಿಕೆಯವರೇ ಇಲ್ಲಿಂದ ಎಲ್ಲಾ ಬೇರೆ ದೇಶಗಳಿಗೆ ಅದಿರು ಹೋಗುತ್ತದೆ. ಅದಕ್ಕೆ ಸರ್ಕಾರದಿಂದ ಯಾವುದೇ ಅಡೆತಡೆಯಾಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಮಾನ್ಯ ಎಸ್.ಎಸ್.ಪಾಟೀಲರ ಪ್ರಶ್ನೆಗೆ ಉತ್ತರ ಕೊಡುವಾಗ ಅರಿಕೆ ಮಾಡಿಕೊಂಡಿದ್ದೇನೆ. ನಾವು ಅಭಿವೃದ್ಧಿಯನ್ನು ಯಾವ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು, ಮನೆಗೆ ವಸತಿ ಸೌಕರ್ಯ ಬೇಕು, ಉತ್ತಮವಾದಂಥ ರಸ್ತೆಗಳು ಬೇಕು, ಸೇತುವೆಗಳು ಬೇಕು. ಇವುಗಳಿಗೆ ಸಿಮೆಂಟ್, ಉಕ್ಕು ಕಬ್ಬಿಣದ

ಅಗತ್ಯತೆ ಇದೆ. ಕಬ್ಬಿಣವನ್ನು ಸೃಷ್ಟಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿರತಕ್ಕ ನೈಸರ್ಗಿಕ ಗಣಿಗಾರಿಕೆಯನ್ನು ಮಾಡಿಕೊಂಡೆ ಅದನ್ನು ಮಾಡಬೇಕಾಗುತ್ತದೆ. ಆದ್ದರಿಂದ ಅಭಿವೃದ್ಧಿಗಾಗಿ ತೆರಬೇಕಾಗಿರತಕ್ಕ ಬೆಲೆ ಇದಾಗಿದ್ದು ಇದು ಅನಿವಾರ್ಯವಾಗಿದೆ. ಆದರೆ ಅದರಲ್ಲಿ ನಾವು ಸಮತೋಲನವನ್ನು ಕಾಪಾಡಿಕೊಳ್ಳಬೇಕು. ಹಾಗಿದೆ ಎಂದ ತಕ್ಷಣವೇ ಇಡೀ ಪರಿಸರವನ್ನು ನಾಶ ಮಾಡಿ ಅಭಿವೃದ್ಧಿಯನ್ನು ಪಡೆಯಬೇಕಾಗಿದ್ದರೆ.. ನಾವು ಈಗಾಗಲೇ ಬೇರೆ ಬೇರೆ ದೇಶಗಳಲ್ಲಿ ಅದರಲ್ಲೂ ದಕ್ಷಿಣ ಅಮೇರಿಕಾ ದೇಶಗಳಲ್ಲಿ ಆಫ್ರಿಕಾ ದೇಶದಲ್ಲಿ ಏನೆಲ್ಲಾ ಅನಾಹುತವಾಗಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಕಾನೂನು ಇರತಕ್ಕದ್ದು ಯಾವುದೇ ಸಂದರ್ಭದಲ್ಲಿ ಕೂಡ ಮೈನಿಂಗ್ ಲೈಸೆನ್ಸ್‌ನ್ನು ಕೊಡಬೇಕಾಗಿದ್ದರೆ ಒಂದು ಲಕ್ಷ ಸ್ಕ್ವೇರ್ ಕಿಲೋಮೀಟರ್‌ವರೆಗೆ ಕೂಡ ರಿಕಾನ್‌ಸೆನ್ಸ್ ತೆಗೆದುಕೊಳ್ಳಲಾಗುತ್ತದೆ. ಅಂದರೆ ಅದರ ಬೇಹುಗಾರಿಕೆ ಮಾಡಿ ಅದರಲ್ಲಿ ನಿಕ್ಷೇಪ ಇದೆಯೋ ಇಲ್ಲವೋ ಎಂಬುದನ್ನು ಕಂಡುಹಿಡಿಯಲು ಹೊಸ ತಂತ್ರಜ್ಞಾನವನ್ನು ಅಳವಡಿಸಿ ಅದರ ಮೂಲಕ ಅದಿರಿನ ನಿಕ್ಷೇಪದ ಒಟ್ಟು ಪ್ರಮಾಣ ಎಷ್ಟಿದೆ ಎಂದು ಗುರುತಿಸಕ್ಕದ್ದು ಇದೆ. 25 ಸ್ಕ್ವೇರ್ ಕಿಲೋಮೀಟರ್‌ಗೆ ಸಂಬಂಧಪಟ್ಟಂತೆ prospective licensing ಎಂದು ಏನು ಪೂರ್ವಭಾವಿಯಾಗಿರತಕ್ಕ ಕ್ರಮಗಳನ್ನು ಅವರು ಕೈಗೊಳ್ಳಬೇಕು. ಅದಕ್ಕೆ ನಾವು ಕೊಟ್ಟಿರುತ್ತೇವೆ. ಅದೇ ರೀತಿ ಹತ್ತು ಸ್ಕ್ವೇರ್ ಕಿಲೋಮೀಟರ್‌ನಷ್ಟು Mining lease ಎನ್ನತಕ್ಕದ್ದನ್ನು ನಾವು ಕೊಡುತ್ತೇವೆ. ನೀವು ಹೇಳಿದಂತೆ ಬೇರೆ ಕೆಲವು ಪರಿಸರಕ್ಕೆ ಸಂಬಂಧಪಟ್ಟಂತೆ, ಪಶ್ಚಿಮ ಘಟ್ಟಗಳೇನಿದೆ ಅಲ್ಲಿ ಕೊಡುತ್ತಿಲ್ಲ. ಏಕೆಂದರೆ ಅಲ್ಲಿ ಜೀವ ಸಂಕುಲ ಬಹಳ ಇದೆ. ಜೀವ ಸಂಕುಲ ಬಹಳ ಇರತಕ್ಕ ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಎಷ್ಟೇ ತೀವ್ರತರವಾದಂಥ ನಿಕ್ಷೇಪ ಇದ್ದರೂ ಕೂಡ.. ಧನ, ಕನಕ, ನಿಕ್ಷೇಪ ಎಂದು ಬರೆಯುತ್ತೇವಲ್ಲಾ ಆ ರೀತಿ ಅಲ್ಲಿ ಎಷ್ಟೇ ನಿಕ್ಷೇಪ ಇದ್ದರೂ ಕೂಡ ತೆಗೆಯಲು ಆಗುವುದಿಲ್ಲ ತಾವು ಹೇಳಿದಂತೆ ಕಪ್ಪತ್ತ ಗುಡ್ಡ ಕೂಡ ನಮ್ಮಲ್ಲಿ ಬಹಳ ಪ್ರಮುಖವಾಗಿರತಕ್ಕದ್ದು. ಹಿಂದೆ ಔಷಧಿ ವನಗಳನ್ನು ಬೆಳೆಸಿರತಕ್ಕದ್ದು. ಬಹಳ ದೊಡ್ಡ ಪ್ರಮಾಣದಲ್ಲಿ ನಾಗಾರ್ಜುನನ ರಸವಿದ್ಯೆಯನ್ನೂ ಕೂಡ ನಾಥಪಂಥೀಯರು ಬಂದು ಕಪ್ಪತ್ತ ಗುಡ್ಡದಲ್ಲಿ ಮಾಡುತ್ತಿದ್ದರು ಎಂದು ಇತಿಹಾಸದಲ್ಲಿ ದಾಖಲೆಗಳು ಇದೆ. ಈ ದೃಷ್ಟಿಯಿಂದ ಅದನ್ನೂ ಕೂಡ ಒಂದು ಸಂರಕ್ಷಿತ ಪ್ರದೇಶವೆಂದು ಕೇಂದ್ರ ಸರ್ಕಾರಕ್ಕೆ ಬರೆಯಬಹುದು. ಆ ರೀತಿ ಬರೆಯುವುದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ತಮ್ಮ ಅಭಿಪ್ರಾಯವನ್ನು ತಿಳಿಸಿ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ತಾವು ಈಗೇನು ಅರಣ್ಯ ನಾಶವಾಗುತ್ತದೆ, ಅದಕ್ಕೆ ಅವರ ಕಡೆಯಿಂದ ಹಣವನ್ನು ತೆಗೆದುಕೊಂಡಿರುತ್ತೇವೆ. ಅದನ್ನು ಅಲ್ಲೆ ಖರ್ಚು ಮಾಡುತ್ತೇವೆಂದು ಹೇಳಿದಿರಿ. ಅಲ್ಲೇ ಆಗದಿದ್ದರೂ ಕೂಡ ಬೇರೆ ಕಡೆಯಾದರೂ ಅದನ್ನು ಮಾಡುತ್ತೇವೆಂದು ಹೇಳಿದಿರಿ. ಈಗಾಗಲೇ ಈ ಹಿಂದೆ ಮುಂಡರಗಿಯ ಕಪ್ಪತ್ತ ಗುಡ್ಡದಲ್ಲಿ ಎಷ್ಟು ಅರಣ್ಯ ನಾಶವಾಗಿದೆ? ಅದನ್ನು ಎಲ್ಲೆಲ್ಲಿ ಮಾಡಿದ್ದೀರಿ? ಅಲ್ಲೇ ಅಭಿವೃದ್ಧಿ ಮಾಡಿದ್ದಿರೊ? ಬೇರೆ ಕಡೆ ಮಾಡಿದ್ದೀರೋ

ಎಂಬುದನ್ನು ಹೇಳಬೇಕಾಗುತ್ತದೆ. ಏಕೆಂದರೆ ಹಣವನ್ನೇ ಖರ್ಚು ಮಾಡಿಲ್ಲ. ಅಲ್ಲಿ ಹಣವೇ ಬರುವುದಿಲ್ಲ. ಸುಮ್ಮನೆ ಹೇಳುತ್ತಾರೆ. ಅರಣ್ಯ ಅಭಿವೃದ್ಧಿಗೆ ಹೋಗುವುದೇ ಇಲ್ಲ. ಮತ್ತು ಬಜೆಟ್‌ನಲ್ಲಿ ಸಹ ಅರಣ್ಯ ಅಭಿವೃದ್ಧಿಗೂ ಹಣಕಾಸು ಸಚಿವರು ಕಡಿಮೆ ಹಣವನ್ನು ಇಟ್ಟಿದ್ದಾರೆ. ಹೀಗಾಗಿ ಈವತ್ತು ಅರಣ್ಯ ನಾಶವಾಗುವುದರಿಂದ ಮುಂದೆ ಎಲ್ಲಾ ಯೋಜನೆಗಳು ಸಹ ಹಾಳಾಗಿಹೋಗುತ್ತದೆ. ನಮ್ಮಲ್ಲಿ ಈಗಾಗಲೇ ಕುಡಿಯಲು ನೀರು ಇಲ್ಲದಿರುವ ಪರಿಸ್ಥಿತಿ ಇದೆ. ನಮ್ಮಲ್ಲಿ ಸಿಂಗಟರಾಯನಕೆರೆ ಎಂಬ ಊರಿದೆ, ಅಲ್ಲಿಗೆ ಈಗಲೂ ಕುಡಿಯಲು ಟ್ಯಾಂಕರ್‌ನಿಂದ ನೀರನ್ನು ಒದಗಿಸುತ್ತಿದ್ದೇವೆ. ಬೋರನ್ನು ಕೊರೆದರೆ ನೀರೇ ಬರುವುದಿಲ್ಲ. ಆದ್ದರಿಂದ ವರ್ಷಾನುಗಟ್ಟಲೇ ಅಲ್ಲಿಗೆ ಟ್ಯಾಂಕರ್‌ನಿಂದ ನೀರನ್ನು ಒದಗಿಸುತ್ತಿದ್ದೇವೆ. ಈ ಪರಿಸ್ಥಿತಿ ಈವತ್ತು ನಿರ್ಮಾಣವಾಗಿದೆ. ಆ ಕಾರಣದಿಂದ ಅದನ್ನು ಏನೇನು ಮಾಡಿದ್ದೀರಿ? ಅದರ ಬಗ್ಗೆ ಎಲ್ಲ ಕ್ರಮ ಕೈಗೊಳ್ಳುತ್ತಿರೊ ಎಂಬ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್:ಮಾನ್ಯ ಅಧ್ಯಕ್ಷರೆ, ತಮಗೂ ಕೂಡ ಗೊತ್ತಿದೆ. ಮನುಷ್ಯನ ದುರಾಸೆ, ಆತನ ಭೋಗ ಜೀವನಕ್ಕೆ ಸಂಬಂಧಪಟ್ಟಂತೆ, ಪರಿಸರದಿಂದ ಅಗತಕ್ಕ ಪತ್ರಿಕೆಗಳನ್ನು, ಪೇಪರ್‌ಗಳನ್ನು ತಯಾರು ಮಾಡುವುದಕ್ಕೆ ಮತ್ತು ಅನಾವಶ್ಯಕವಾಗಿ ಅಗತ್ಯವಿಲ್ಲದೆ ಇರತಕ್ಕದನ್ನೂ ಕೂಡ ನಿಸರ್ಗದಿಂದ ಪಡೆಯುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ನೀವು ಹೇಳುವ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇವೆ. ಆದರೆ ಅನಿವಾರ್ಯವಾದಂಥ ಸ್ಥಿತಿ. ಈ ಸ್ಥಿತಿಯಲ್ಲಿ ಎಲ್ಲೋ ಒಂದು ಕಡೆ ಸಮತೋಲನವನ್ನು ಕಾಪಾಡಬೇಕೆಂದು ಮೊದಲೂ ಕೂಡ ಹೇಳಿದ್ದೇನೆ. ಈ ತಾವು ಹೇಳಿದಂತೆ ಇಲ್ಲಿ ಎಲ್ಲೆಲ್ಲಿ ಆಗಿದೆ ಎಂದು ಕೇಂದ್ರದಿಂದ ದುಡ್ಡು ಬರುತ್ತದೆ. ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ತಾವು ಕೇಳಿದರೆ, ಅಥವಾ ಅದರ ಮಾಹಿತಿಯನ್ನು ನಮ್ಮ ಇಲಾಖಾಧಿಕಾರಿಯವರಿಗೆ ಹೇಳಿ, ಇಲ್ಲಿಯವರೆಗೆ ಸಂಗ್ರಹಿಸಿರತಕ್ಕ ರಾಜಸ್ವ ನಿಧಿ ಏನಿದೆ, ರಾಯಲ್ಟಿ ಏನಿದೆ ಅದರ ಜೊತೆ ಇದನ್ನು ಕೂಡ ಅವರು ತೆಗೆದು ಕೊಂಡಿರುತ್ತಾರೆ. ಅಲ್ಲಿ ಅವರೆಲ್ಲರಿಗೂ ಕೂಡ ನಾವು ಗಣಿಗಾರಿಕೆ ಮಾಡುವಾಗ ಸುರಕ್ಷಿತವಾಗಿರತಕ್ಕ ಗೋಡೆಗಳನ್ನು ಕಟ್ಟಬೇಕೆಂದು ಸಹ ಹೇಳುತ್ತೇವೆ. protective wall ಎಂದು. ಭೂಮಿಯ ಮಣ್ಣು ಜರಿದು ಅಲ್ಲಿ ಹೋಗಬಾರದು ಎಂದು. ಮೇಲ್ಭಾಗ ಪದರು ಹೋದ ತಕ್ಷಣವೇ ಅಲ್ಲಿ ಮರಗಿಡಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿಯೇ ಅವರಿಂದ ಎಷ್ಟು ಹಣ ಬಂದಿದೆ, ಮತ್ತು ಬೇರೆ ಕಡೆ ಎಲ್ಲಿ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ತಾವು ನನಗೆ ಒಂದು ವೈಯಕ್ತಿಕವಾದ ಪತ್ರವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ನನಗೆ ಬಂದ ಸಧ್ಯದ ಮಾಹಿತಿಯ ಪ್ರಕಾರ ಐದರಿಂದ ಎಂಟು ಲಕ್ಷ ರೂಪಾಯಿಗಳನ್ನು ಒಂದು ಹೆಕ್ಟಾರ್ ಅಂದರೆ ಎರಡೂವರೆ ಎಕರೆಗೆ ಅವರಿಂದ ನಾವು ತೆಗೆದುಕೊಂಡಿರುತ್ತೇವೆ. ಅದನ್ನು ಬೇರೆ ಕಡೆ ಸಹ ಮಾಡಿರುತ್ತೇವೆ. ಒಟ್ಟು ನಿಮ್ಮ ಕಪ್ಪತ್ತ ಗುಡ್ಡದಿಂದ ಬಂದಿರತಕ್ಕ ನಿಧಿ ಎಷ್ಟು ಮತ್ತು ಬೇರೆ ಕಡೆಗೆ ಎಷ್ಟು ಖರ್ಚು ಮಾಡಿದ್ದಾರೆ ಎಂಬ ವಿವರವನ್ನು ನಮ್ಮ ಅಧಿಕಾರಿಗಳು ತಮಗೆ ಪತ್ರವನ್ನು ಬರೆದು ತಿಳಿಸುತ್ತಾರೆ.

ಅಧ್ಯಕ್ಷರು: ಶ್ರೀಮತಿ ಸುನೀತಾವೀರಪ್ಪಗೌಡ, ಮಾನ್ಯ ಸದಸ್ಯರೀಯವರು ಗೈರು ಹಾಜರಿದ್ದಾರೆ. ಮುಂದಿನ ಪ್ರಶ್ನೆ ಮಾನ್ಯ ಡಿ.ಆರ್.ಪಾಟೀಲ್‌ರವರು.